


ರಕ್ಷಣೆಗೆ ಸರ್ಕಾರ ಹೆಲಿಕಾಪ್ಟರ್ ಒದಗಿಸಿದ್ದು ಬಹಳ ಜನರ ಪ್ರಾಣ ಉಳಿಸಲು ನೆರವಾಯಿತು.

ಟರ್ಕಿ, ಸಿರಿಯಾದ ಸಾವಿನ ರಾಶಿಯಿಂದ ಎದ್ದು ಬಂದ ಚಿತ್ರಗಳು ಹಾಗೂ ಅಲ್ಲಿನವರ ಪ್ರಾಣ ಉಳಿಸಲು ಜಗತ್ತಿನೆಲ್ಲೆಡೆ ತಮ್ಮ ತಮ್ಮದೇ ರೀತಿಯಲ್ಲಿ ಪ್ರಾರ್ಥಿಸಿದ ಹೃದಯಗಳ ಧರ್ಮ, ಜಾತಿ, ಬಣ್ಣ ಯಾವುದು? ಹೃಷಿಕೇಶದ ಮಡಿಲಲ್ಲಿ ಸಿಲುಕಿದವರಿಗಾಗಿ ಜಗತ್ತಿನ ಯಾವ್ಯಾವುದೋ ದೇಶದಲ್ಲಿ ಪ್ರಾರ್ಥಿಸಿದವರ ಹೃದಯಗಳ ಧರ್ಮ, ಜಾತಿ, ಬಣ್ಣ ಯಾವುದು? ಈ ಪ್ರಾರ್ಥನೆಗಳ ಗಡಿ ಯಾವುದು? ಉಳಿದೆಲ್ಲಾ ಸಮಯದಲ್ಲಿ 'ತನಗೆ-ತನ್ನಿಂದ-ತನ್ನಿಂದಾಗಿ' ಎನ್ನುವ ಅಹಂ ಜೊತೆಗೇ ಸಂಸಾರ ನಡೆಸುವ ನಮಗೆಲ್ಲಾ ಮನುಷ್ಯರು ಎಂದು ನೆನಪಾಗುವುದು ಸಾವಿನ ಕನ್ನಡಿ ಮುಂದೆ ನಿಂತಾಗ ಮಾತ್ರವಾ? ನಿತ್ಯ ಬಾಂಬು, ಬುಲೆಟ್‌ಗಳಿಗೆ ತಮ್ಮವರು ಬಲಿಯಾಗುವುದನ್ನೇ ಕಾಣುತ್ತಿದ್ದ ಸಿರಿಯಾದ ಜನ ಕೊರೊನಾ ಕಾಲದಲ್ಲಿ ಕಂಡುಕೊಂಡ ನೆಮ್ಮದಿ ಒಂದು ಕಡೆಗಿದೆ. ಮತ್ತೊಂದು ಕಡೆಗೆ, ಇದೇ ಸಿರಿಯಾ ಭೂಕಂಪದ ಅಡಿಗೆ ಸಿಲುಕಿದಾಗ ಸಾವಿನ ರಾಶಿಗಳ ಮೇಲೆಯೇ ಬಂದು ಬಿದ್ದ ಇಸ್ರೇಲ್‌ನ ಬಾಂಬುಗಳಿವೆ. ಎಲ್ಲವೂ ಒಮ್ಮೆಲೇ ನೆನಪಾಗಿ ಹೃದಯ ಭಾರವಾಗಿ ನಟೇಶ್‌ಗೆ ಫೋನಾಯಿಸಿದೆ. ತಹಶೀಲ್ದಾರ್ ಆಗಿದ್ದ ನಟೇಶ್ ಎ.ಸಿ.ಯಾಗಿ ಪದೋನ್ನತಿ ಹೊಂದಿದ್ದರು. ತುಂಬಾ ದಿನಗಳಿಂದ ಮಾತನಾಡಲಾಗಿರಲಿಲ್ಲ. ಫೋನ್ ಮಾಡಿ ವಿಶ್ ಮಾಡಿದೆ. ಹತ್ತು ವರುಷಗಳ ಹಿಂದಿನ ನೆನಪುಗಳನ್ನು ಮೆಲುಕು ಹಾಕಿದೆ. ಫೋನ್ ಇಡುವಷ್ಟರಲ್ಲಿ ಊರಿನ ಚಿಕ್ಕಪ್ಪನ ಮಗನ ಮೊಬೈಲ್‌ನಿಂದ ಐದು ಮಿಸ್ಡ್ ಕಾಲ್‌ಗಳಿದ್ದವು. ವಾಪಸ್ ಕರೆ ಮಾಡಿ ವಿಚಾರಿಸಿದೆ.

'ಹಲೋ, ಹೇಳಪ್ಪ... ಏನ್ ಸಮಾಚಾರ'.

'ನಾನು ಇವತ್ತು ಊರಿಗೆ ಬರುವುದು ರಾತ್ರಿಯಾಗುತ್ತೆ. ನೀನು ನಾಳೆ ಬಾ. ಇವತ್ತು ಬರುವುದು ಬೇಡ'.

'ಯಾಕೆ? ಎಲ್ಲಿದ್ದೀಯ? ಏನಾಯ್ತು?'

'ನಮ್ಮ ಎಂಎಲ್‌ಎ ಕ್ಯಾಂಡಿಡೇಟ್ ಬಸ್ ಮಾಡಿ ಧರ್ಮಸ್ಥಳಕ್ಕೆ ಟೂರ್ ಕಳಿಸಿದ್ದಾರೆ. ಬರೋದು ಲೇಟಾಗುತ್ತೆ. ಅದಕ್ಕೆ ಇವತ್ತು ಬೇಡ. ನಾಳೆ ಬಾ' ಎಂದು ಫೋನ್ ತುಂಡರಿಸಿದ.

●